ಅಂಶಗಳೂ ಒಂದಿಷ್ಟು ಆಧುನಿಕ ಶೈಲಿಗಳೂ ಹದವಾಗಿ ಬೆರೆತು ಸುಂದರ ಕಾರ್ಯಕ್ರಮ ಮೂಡಿಬರುವುದಿದೆ.

ಈ ಎಲ್ಲ ತಯಾರಿಯ ಜೊತೆಗೆ ಮದುವೆಯ ದಿನದ ಕೇಂದ್ರಬಿಂದುಗಳಾದ ಮದುಮಕ್ಕಳನ್ನೂ ಶೃಂಗರಿಸುವುದು ಕಾಳಜಿಯಿಂದ ನಡೆಯುವ ಕಾರ್ಯ.

ಮದುವೆಯ ಸಂದರ್ಭದಲ್ಲಿ ವಿಶೇಷಾಲಂಕಾರ ನಮಗೆ ಹೊಸತೇನಲ್ಲ. ಅನಾದಿಕಾಲದಿಂದಲೂ ಮದುವೆಯ ದಿನ ಮದುವಣಗಿತ್ತಿಯನ್ನೂ ಮದುಮಗನನ್ನೂ ವಿಶೇಷವಾಗಿ ಅಲಂಕರಿಸುವ ಪದ್ಧತಿ ಇದ್ದೇ ಇದೆ. ನಮ್ಮ ಪುರಾಣಗಳಲ್ಲಿ ಬರುವ ಸೀತಾ ಕಲ್ಯಾಣ, ಗಿರಿಜಾ ಕಲ್ಯಾಣ, ಶ್ರೀನಿವಾಸ ಕಲ್ಯಾಣದ ಸಂದರ್ಭಗಳನ್ನು ಗಮನಿಸಿದರೆ ಮದುವೆ, ವರೋಪಚಾರ, ತಿಂಡಿ ತಿನಿಸುಗಳ ವೈಭವೋಪೇತ ವರ್ಣನೆಗಳು ಸಾಕಷ್ಟು ಕಾಣಸಿಗುತ್ತವೆ. ಲಕ್ಷ್ಮೀಶೋಭಾನೆಯಲ್ಲಂತೂ ಶ್ರೀವಾದಿರಾಜರು ಲಕ್ಷ್ಮೀ ನಾರಾಯಣರ ಮದುವೆಯ ಸಂದರ್ಭದಲ್ಲಿ ವಿವರವಾಗಿ ಲಕ್ಷ್ಮೀದೇವಿಯ ಅಲಂಕಾರವನ್ನು ವರ್ಣಿಸಿದ್ದಾರೆ. 'ದೇವಾಂಗ ಪಟ್ಟೆಯ ಮೇಲು ಹೊದಿಕೆಯನ್ನೂ, ಬಿಂಬದಂತೆಸೆಯುವ ಮೂಗುತಿ ಮಣಿಯನ್ನೂ, ಮುತ್ತಿನ ಓಲೆಯನ್ನೂ, ಕಸ್ತೂರಿ ತಿಲಕವನ್ನೂ, ನವರತ್ನದ ಮುಕುಟವನ್ನೂ ಧರಿಸಿ ಕುಂದಮಂದಾರ ಜಾಜಿ ಕುಸುಮಗಳನ್ನು ತುರುಬಿನಲ್ಲಿ ಜೋಡಿಸಿ ಎಂದೆಂದೂ ಬಾಡದ ಅರವಿಂದ ಮಾಲೆಯನ್ನು ಲಕ್ಷ್ಮೀದೇವಿಯು ಧರಿಸಿದ್ದಳು' ಎಂದು ವಿವರಿಸುತ್ತಾರೆ. ಹಸೆಹಾಡುಗಳಲ್ಲೂ ಸಾಕಷ್ಟು ಮದುಮಕ್ಕಳ ಅಲಂಕಾರದ ವಿವರಗಳು ಬರುತ್ತವೆ. ಅಂತೂ ಮದುವೆಯೆಂದರೆ ಎಲ್ಲ ತಯಾರಿಯ ಜೊತೆಗೆ ಮದುಮಗಳ ಅಲಂಕಾರವೇ ಅತ್ಯಂತ ಪ್ರಮುಖವಾದದ್ದು.

ಮದುವೆಯ ಸಂದರ್ಭದಲ್ಲಿ ಎಲ್ಲ ಕಾರ್ಯಕ್ರಮಗಳಿಗೂ ತಯಾರಿ ನಡೆಸಬೇಕಾಗುತ್ತದೆ. ಮದುಮಗಳು/ ಮದುಮಗ ಮಾತ್ರವಲ್ಲದೆ ಅವರ ಅಪ್ಪ, ಅಮ್ಮ, ಸಹೋದರ/ ಸಹೋದರಿಯರು, ಆಪ್ತೇಷ್ಟರೆಲ್ಲ ವಿಶೇಷವಾಗಿ ರಂಗುರಂಗಿನ ಉಡುಪು/ ಜರತಾರಿ ಸೀರೆಯನ್ನುಟ್ಟು ಬಗೆಬಗೆಯ ಚಿನ್ನದ ಆಭರಣಗಳನ್ನು ಧರಿಸಿ ಮಿಂಚುತ್ತಾರೆ. ಮೊದಲು ತಮ್ಮ ಆಯ್ಕೆಯನ್ನು ಸ್ಪಷ್ಟಪಡಿಸಿಕೊಂಡು ಸಾಕಷ್ಟು ಪೂರ್ವತಯಾರಿ ನಡೆಸಿ ತಮಗಿಷ್ಟವಾದ ಅಂಗಡಿಗಳಿಗೆ ಹೋಗಿ ಒಟ್ಟಾಗಿ ಜವಳಿ-ಚಿನ್ನ ಖರೀದಿಸುವುದೂ ಒಂದು ಸಂಭ್ರಮ. ಕೆಲವೆಡೆ ವಿಶೇಷ ದಿನಗಳನ್ನು ಪುರೋಹಿತರ ಬಳಿ ಕೇಳಿಕೊಂಡು ಜವಳಿ ಖರೀದಿಗಾಗಿ ಹೋಗುವ ಸಂಪ್ರದಾಯ ಇದೆ. ಇಷ್ಟಾದರೆ ಮದುವೆ ತಯಾರಿಯ ಬಹುಭಾರ ಇಳಿದಂತೆ.

ನಮ್ಮದು ಸಾಂಸ್ಕೃತಿಕವಾಗಿ ಸಂಪದ್ಭರಿತ ದೇಶ. ಅಂದ ಮೇಲೆ ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೂ ಗಮನವಿಟ್ಟು ನೋಡಿದರೆ ಮದುವೆ ಅಲಂಕಾರದಲ್ಲಿ ಅದೆಷ್ಟು ವೈವಿಧ್ಯಗಳು, ಅಲಂಕಾರಕ್ರಮಗಳು, ಮದುವೆಯ ರೀತಿ ರಿವಾಜುಗಳು – ಅಬ್ಬಾ ನಮ್ಮ ಸಂಸ್ಕೃತಿಯ ವೈವಿಧ್ಯತೆಯ ಅರಿವಾಗಿ ಹೆಮ್ಮೆಯ ಜೊತೆಗೆ ಅಚ್ಚರಿ ಉಂಟಾಗುತ್ತದೆ.

ಒಟ್ಟಾರೆಯಾಗಿ ಗಮನಿಸಿದರೆ ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಮದುಮಗನಿಗೆ ಕಚ್ಚೆ ಪಂಚೆ, ಧೋತಿ, ಮುಂಡು, ರೇಷ್ಮೆಯ ಜುಬ್ಬವೋ, ಬಿಳಿ ಅಂಗಿಯೋ ಧರಿಸಿ ಮೇಲೊಂದು ಅಂಗವಸ್ತ್ರವನ್ನು ಹಾಕಿ ತಲೆಯ ಮೇಲೆ ಮುಂಡಾಸು ಅಥವಾ ಪೇಟ ಕಟ್ಟಿದರೆ ಆಯಿತು. ಕೆಲವೆಡೆ ಸಾಂಪ್ರದಾಯಿಕ ಮದುವೆಗಳಲ್ಲಿ ಮದುಮಗ ಕಚ್ಚೆ ಪಂಚೆ, ಮೇಲೊಂದು ಅಂಗವಸ್ತ್ರ ಅಥವಾ ಉತ್ತರೀಯ ಧರಿಸಿ ಚಿನ್ನದ ಆಭರಣಗಳ ಜೊತೆ ಹೂವಿನ ಮಾಲೆಯನ್ನು ಧರಿಸುತ್ತಾನೆ. ಉತ್ತರ ಭಾರತದಲ್ಲಿ ಕುರ್ತಾ, ಸಲ್ವಾರ್, ಧೋತಿ, ವೈವಿಧ್ಯಮಯ ಶೇರ್ವಾನಿ, ಭೋಜ್‌ಪುರಿ ಸೂಟ್ ಮುಂತಾದುವುಗಳನ್ನು ಧರಿಸುವುದೇ ಹೆಚ್ಚು. ಪಾಶ್ಚಾತ್ಯ ಸೂಟ್‌ಗಳನ್ನೂ ಧರಿಸುವುದಿದೆ. ಈ ಎಲ್ಲ ದಿರಿಸುಗಳನ್ನು ಅತ್ಯಂತ ಆಸ್ಥೆಯಿಂದ ವಿಶೇಷ ವಿನ್ಯಾಸಗಳಿಂದ ಪ್ರತಿಷ್ಠಿತ



